# ಆಹಾ ಸುದ್ದಿ!

★ ಸಸಿತೋಟ




ಬದುಕೆಂಬೊ ಆಟದಲ್ಲಿ ಸೆಂಚುರಿ ಬಾರಿಸಿರುವ ದಕ್ಷಿಣ ಆಫ್ರಿಕಾದ ಜಾರ್ಜಿನಾ ಹುಟ್ಟುಹಬ್ಬ ಆಚರಿಸಿದ್ದು ಸ್ಕೈಡೈವ್ ಮಾಡುವ ಮೂಲಕ. ಆಕೆ 90 ದಾಟಿದ ಮೇಲೆ ಈ ರೀತಿ ಆಕಾಶದಲ್ಲಿ ಜಂಪ್ ಹೊಡೆದಿದ್ದು ಇದು ಮೂರನೇ ಬಾರಿಯಂತೆ. ವಯಸ್ಸಾದ ಮೇಲೆ ಯಾವಾಗ ಪರಲೋಕಕ್ಕೆ ಜಂಪ್ ಹೊಡೆಯುತ್ತೇವೆಯೋ ಎಂದು ಹೆದರಿ ಕೂರುವವರ ಸಂಖ್ಯೆಯೇ ಜಾಸ್ತಿ ಇರುವಾಗ ಜಾರ್ಜಿನಾ ಜಿಗಿದಾಟ ವಂಡರ್ರೇ ಸರಿ.



ಕೊಲಂಬಿಯಾದಲ್ಲಿ ಬಿಸಾಕಿದ ಟೈರ್‌ಗಳನ್ನು ಬಳಸಿ ಮನೆಗಳನ್ನು ಕಟ್ಟಲಾಗಿದೆ. ಪ್ರತಿ ವರ್ಷ ಅಲ್ಲಿ 53 ಲಕ್ಷ ಟೈರ್‌ಗಳನ್ನು ಬಿಸಾಡುತ್ತಾರಂತೆ. ಅವುಗಳು ಕೊಳೆಯಲು ಲಕ್ಷಗಟ್ಟಲೆ ವರ್ಷಗಳು ಬೇಕು. ಚಳಿ ನುಗ್ಗದ, ಭೂಕಂಪಕ್ಕೆ ಕಂಪಿಸದ ಇಂತಹ ಮನೆಗಳು ಕಸದಿಂದ ರಸ ಕಲ್ಪನೆಯಲ್ಲಿ ಎದ್ದು ನಿಂತಿವೆ.

ಥಾಯ್ಲೆಂಡ್‌ನಲ್ಲಿ ಎದೆ ಭಾಗದ ಸೆಲ್ಫಿ ತೆಗೆದು ಅಂತರ್ಜಾಲದಲ್ಲಿ ಹಾಕುವ ಟ್ರೆಂಡ್ ಜಾಸ್ತಿಯಾಗಿದ್ದು, ಸರ್ಕಾರ ಕಂಪ್ಯೂಟರ್ ಕ್ರೈಮ್ ಕಾನೂನು ಪ್ರಯೋಗಿಸಲು ಮುಂದಾಗಿದೆಯಂತೆ. ರೋಚಕ ರಾತ್ರಿ ಬದುಕಿಗೆ ಕುಖ್ಯಾತವಾದ ಥಾಯ್ಲೆಂಡ್ ಸಂಸ್ಕೃತಿ ರಕ್ಷಣೆಗೆ ಮುಂದಾಗಿದ್ದು ವೈರುಧ್ಯವೇ ಸರಿ. ಆದರೆ ಮುಖವಿಲ್ಲದೇ ಮಹಿಳೆಯರನ್ನು ಪತ್ತೆ ಮಾಡುವ ಬಗೆ ಬಗ್ಗೆ ಅಲ್ಲಿಯ ಸರ್ಕಾರ ತಲೆಕೆಡಿಸಿಕೊಂಡಿದೆಯಂತೆ.



ಅಮೆರಿಕದ ಈ ಬೆಕ್ಕಿನ ಹೆಸರು ‘ಕಿಟ್ ಕರ್‌ದರ್ಶಿಯಾನ್’. ಅಲ್ಲಿಯ ಸೆಲೆಬ್ರಿಟಿ ಕಿಮ್ ಕರ್‌ದರ್ಶಿಯಾನ್ ಭರ್ಜರಿ ಹಿಂಭಾಗವನ್ನು ಈ ದಢೂತಿ ಬೆಕ್ಕು ಹೊಂದಿದ್ದು ಈ ಅಡ್ಡ ಹೆಸರು ಬರಲು ಕಾರಣವಂತೆ. ಹಿಂದೊಮ್ಮೆ ನಗ್ನ ಚಿತ್ರವನ್ನು ಹಾಕಿ ಇಂಟರ್‌ನೆಟ್ ಕ್ರ್ಯಾಷ್ ಆಗುವಂತೆ ಮಾಡಿದ್ದ ಕಿಮ್‌ಗೆ ಸವಾಲು ಹಾಕಲು ಈ ಕಿಟ್ ಬಳಿ ಅಂತಹ ‘ಆಸ್ತಿ’ ಏನೂ ಇಲ್ಲವಲ್ಲ.



ಲಂಡನ್ನಿನಲ್ಲಿರುವ ಬುದ್ಧಾ ಬಾರ್ ಉಪಾಹಾರಗೃಹದಲ್ಲಿ ಜಪಾನಿನ ಖ್ಯಾತ ಖಾದ್ಯ ಸುಶಿಯನ್ನು ಇಡಲು ಪ್ಲೇಟ್ ಬದಲು ನಗ್ನ ರೂಪದರ್ಶಿಗಳನ್ನು ಬಳಸುತ್ತಿದ್ದಾರಂತೆ. ಹಸಿ ಸಾಲ್ಮನ್ ಮೀನಿನ ಈ ಖಾದ್ಯವನ್ನು ಗಿರಾಕಿಗಳು ನೇರವಾಗಿ ರೂಪದರ್ಶಿಯ ದೇಹದ ಮೇಲಿಂದ ಎತ್ತಿಕೊಂಡು ತಿನ್ನಬಹುದು. ಹೊಟ್ಟೆ ಚೆನ್ನಾಗಿದೆ, ತೊಡೆ ಚೆನ್ನಾಗಿದೆ ಅಂದರೆ ಅದು ಮೀನಿಂದೋ, ರೂಪದರ್ಶಿಯದೋ ಎಂದು ಏಳುವ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?

ಒರೆಗಾನ್ ಮಹಿಳೆಯೊಬ್ಬಳು ಆತ್ಮಹತ್ಯೆ ಮಾಡಿಕೊಳ್ಳಲು ಏನೆಲ್ಲಾ ಪ್ರಯತ್ನಪಟ್ಟರೂ ವಿಫಲವಾಗಿ ಈಗ ಆಸ್ಪತ್ರೆಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾಳಂತೆ. 39ರ ಮಹಿಳೆ ಹೆದ್ದಾರಿಯಲ್ಲಿ ಗಂಟೆಗೆ 110 ಮೈಲು ವೇಗದಲ್ಲಿ ಕಾರು ಓಡಿಸಿ ವಿಭಜಕಕ್ಕೆ ಢಿಕ್ಕಿ ಹೊಡೆದಳಂತೆ. ಕಾರು ಚಾಲನೆ ಮಾಡುತ್ತಿರುವಾಗಲೇ ಮೈಗೆ ಬೆಂಕಿ ಹಚ್ಚಿಕೊಂಡಳಂತೆ. ಪೊಲೀಸರು ಬಂದು ರಕ್ಷಣೆ ಮಾಡುವಷ್ಟರಲ್ಲಿ 12 ಮೀಟರ್ ಎತ್ತರದಿಂದ ಕೆಳಗೆ ಜಿಗಿದಳಂತೆ. ಆದರೂ ಸಾಯಲಿಲ್ಲ ಎಂದರೆ ಹಣೆಯಲ್ಲಿ ಬರೆದಿಲ್ಲ ಎಂದು ಸುಮ್ಮನಾಗಬೇಕಷ್ಟೆ.